# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1215

2) ಮಾನ್ಯ ಸದಸ್ಯರ ಹೆಸರು : ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

3) ಉತ್ತರಿಸುವ ದಿನಾಂಕ : 21/08/2025

4) ಉತ್ತರಿಸುವ ಸಚಿವರು : ಗೃಹ ಸಚಿವರು

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ರಾಜ್ಯದಲ್ಲಿ ಠಾಣೆಗಳ ವ್ಯಾಪ್ತಿ ಪ್ರದೇಶವನ್ನು ಹೇಗೆ ನಿಗದಿ ಮಾಡಲಾಗುತ್ತಿದೆ; ಅನುಸರಿಸುತ್ತಿರುವ ನಿಯಮಗಳು ಯಾವುವು; (ವಿವರ ನೀಡುವುದು) | ಕಾನೂನು ಮತ್ತು ಸುವ್ಯವಸ್ಥೆ ಪಾಲನೆ, ಅಪರಾಧ ಪ್ರಕರಣಗಳ ತನಿಖೆ, ಸಂಚಾರ ನಿಯಂತ್ರಣ ಇತ್ಯಾದಿ ಪ್ರಮುಖ ಕರ್ತವ್ಯಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಪೊಲೀಸ್ ಠಾಣೆಗಳ ವ್ಯಾಪ್ತಿಯು ಕಿರಿದಾಗಿರುವುದು ಸೂಕ್ತವಾಗಿರುತ್ತದೆ. ಸಾರ್ವಜನಿಕರಿಗೆ ಪೊಲೀಸಿಂಗ್ ಸೇವೆಗಳ ಲಭ್ಯತೆಯು ಪೊಲೀಸ್ ಠಾಣೆಗಳ ವ್ಯಾಪ್ತಿಯನ್ನು ನಿರ್ಧರಿಸುವ ಪ್ರಮುಖ ಅಂಶವಾಗಿರುತ್ತದೆ. 2ನೇ ರಾಷ್ಟ್ರೀಯ ಪೊಲೀಸ್ ಆಯೋಗವು ಪರಿಣಾಮಕಾರಿ ಪೊಲೀಸಿಂಗ್ ಕರ್ತವ್ಯಗಳ ನಿರ್ವಹಣೆಗೆ ಪೊಲೀಸ್ ಠಾಣೆಗಳ ವ್ಯಾಪ್ತಿಯನ್ನು 150 ಚ.ಕಿ.ಮೀ ಎಂದು ಶಿಫಾರಸ್ಸು ಮಾಡಿದ್ದು, ಸದರಿ ಶಿಫಾರಸ್ಸಿನನ್ವಯ ಸುತ್ತೋಲೆ ಸಂಖ್ಯೆ: ಆರ್.ಎಲ್.ಎನ್(5)/02/2017-18, ದಿನಾಂಕ: 28.12.2017ರನ್ವಯ ನೂತನ ಪೊಲೀಸ್ ಠಾಣೆ ಸೃಜನೆಗೆ ಕನಿಷ್ಠ ವ್ಯಾಪ್ತಿಯನ್ನು 150 ಚ.ಕಿ.ಮೀ ಎಂದು ನಿಗದಿಪಡಿಸಲಾಗಿದೆ. |
| ಆ) | ರಾಜ್ಯದಲ್ಲಿ ಈಗಾಗಲೇ ಇರುವ ಪೊಲೀಸ್ ಠಾಣೆಗಳ ವ್ಯಾಪ್ತಿ ಪ್ರದೇಶವನ್ನು ಮರು ವಿಂಗಡಣೆ ಮಾಡಿ ತರ್ಕಬದ್ಧಗೊಳಿಸುವ (Rationalisation) ಯೋಚನೆ ಸರ್ಕಾರಕ್ಕೆ ಇದೆಯೇ; | ಅತ್ಯಂತ ಕಡಿಮೆ ವ್ಯಾಪ್ತಿ ಹೊಂದಿರುವ ಮಂಜೂರಾತಿ ಬಲ, ಕಡಿಮೆ ಅಪರಾಧ ಪ್ರಕರಣಗಳು ವರದಿಯಾಗುವ ಪೊಲೀಸ್ ಠಾಣೆಗಳನ್ನು ಗುರುತಿಸಿ ಅವಶ್ಯವಿರುವ ಪೊಲೀಸ್ ಠಾಣೆಗಳಿಗೆ ವ್ಯಾಪ್ತಿ/ಸಿಬ್ಬಂದಿ ಬಲ ಮರುಹಂಚಿಕೆ ಮಾಡುವ ಕುರಿತು ಸ್ವೀಕರಿಸಲಾಗುವ ಪ್ರಸ್ತಾವನೆಗಳನ್ನು ಪರಿಶೀಲಿಸಲಾಗುವುದು. |
| ಇ) | ಈಗಾಗಲೇ ಇರುವ ಕೆಲವು ಪೊಲೀಸ್ ಠಾಣೆಗಳ ಸುತ್ತಮುತ್ತಲ ಪ್ರದೇಶಗಳನ್ನು ದೂರದ ಪೊಲೀಸ್ ಠಾಣೆಗಳಿಗೆ ನಿಗದಿಪಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಇದನ್ನು ಸರಿಪಡಿಸಲು ಯಾವಾಗ ಕ್ರಮ ವಹಿಸಲಾಗುವುದು; | ಪ್ರಶ್ನೆ "ಆ" ರಲ್ಲಿನ ಉತ್ತರದಿಂದ ಉದ್ಭವಿಸುವುದಿಲ್ಲ. |
| ಈ) | ಮಂಗಳೂರಿನ ವಾಮಂಜೂರಿನ ಪೊಲೀಸ್ ಠಾಣೆಗೆ ಅಡ್ಯಾರು ಅರ್ಕುಳದವರೆಗಿನ ಸುಮಾರು 12 ಕಿಲೋಮೀಟರ್ ದೂರದ ಪ್ರದೇಶವನ್ನು ಸೇರಿಸಿರುವುದರ ಔಚಿತ್ಯವೇನು; | ಮಂಗಳೂರು ಗ್ರಾಮಾಂತರ ಠಾಣೆಯು ವಾಮಂಜೂರಿನಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಸದರಿ ಠಾಣಾ ವ್ಯಾಪ್ತಿಯ ಅಡ್ಯಾರು ಮತ್ತು ಅರ್ಕುಳ ಗ್ರಾಮಗಳು ಠಾಣೆಯಿಂದ ಸುಮಾರು 20 ಕಿ.ಮೀ.ಗಿಂತಲೂ ದೂರವಿದ್ದು, ಈ ಪ್ರದೇಶಗಳಲ್ಲಿ ದಾಖಲಾಗಿರುವ ಅಪರಾಧ ಪ್ರಕರಣಗಳು ಅಧಿಕವಾಗಿದ್ದು, ಈ ಪ್ರದೇಶಗಳು ಗ್ರಾಮಾಂತರ ಠಾಣೆಯಿಂದ ದೂರ ಇರುವುದರಿಂದ ಘಟನೆಯಾದ ತಕ್ಷಣ ತಲುಪಲು ಕಷ್ಟಸಾಧ್ಯವಾಗುತ್ತದೆ ಹಾಗೂ ಈ ಪ್ರದೇಶಗಳು |

| | | |
|---|---|---|
| | | ಕಂಕನಾಡಿ ನಗರ ಠಾಣೆಗೆ ಹತ್ತಿರದಲ್ಲಿದ್ದ ಕಾರಣ ಆಡಳಿತಾತ್ಮಕ, ಸಾರ್ವಜನಿಕ ಹಾಗೂ ಕಾನೂನು ಸುವ್ಯವಸ್ಥೆಯ ಹಿತದೃಷ್ಟಿಯಿಂದ ಮಂಗಳೂರು ಗ್ರಾಮಾಂತರ ಠಾಣಾ ವಾಪ್ತಿಗೆ ಒಳಪಡುತ್ತಿದ್ದ, ಅಡ್ಯಾರು ಮತ್ತು ಅರ್ಕುಳ ಗ್ರಾಮಗಳನ್ನು ಕಂಕನಾಡಿ ನಗರ ಠಾಣಾ ವ್ಯಾಪ್ತಿಗೆ ಒಳಪಡಿಸಿ ಸರ್ಕಾರದ ಅಧಿಸೂಚನೆ ಸಂಖ್ಯೆ: ಹೆಚ್‌ಡಿ/77/ಪಿಓಪಿ/2020, ದಿನಾಂಕ: 31.05.2021ರನ್ವಯ ಆದೇಶಿಸಲಾಗಿದೆ. |
| ಉ) | ವಾಮಂಜೂರು ಪೊಲೀಸ್ ಠಾಣೆಯ ಸುತ್ತಮುತ್ತಲ ಮೂಡು ಶೆಡ್ಡೆ ಪ್ರದೇಶಗಳನ್ನು 7-8 ಕಿಲೋ ಮೀಟರ್ ದೂರದಲ್ಲಿರುವ ಕಾವೂರು ಪೊಲೀಸ್ ಠಾಣೆ ವ್ಯಾಪ್ತಿಗೆ ಬರುತ್ತಿದ್ದು ಈ ಸಮಸ್ಯೆಯನ್ನು ಈಗಾಗಲೇ ಸರ್ಕಾರದ ಗಮನಕ್ಕೆ ತಂದಿದ್ದು ಈ ಕುರಿತು ಇಲಾಖೆ ಯಾವಾಗ ಕ್ರಮ ಕೈಗೊಳ್ಳುವುದು? | ಮಂಗಳೂರು ಗ್ರಾಮಾಂತರ (ವಾಮಂಜೂರು) ಪೊಲೀಸ್ ಠಾಣೆಯ ಸರಹದ್ದಿನ ವ್ಯಾಪ್ತಿಯಲ್ಲಿ ಸರ್ಕಾರಿ ಜಮೀನು ಲಭ್ಯವಾದ ಕಾರಣ ವಾಮಂಜೂರು ಪ್ರದೇಶದಲ್ಲಿ ಮಂಗಳೂರು ಗ್ರಾಮಾಂತರ ಪೊಲೀಸ್ ಠಾಣೆಯನ್ನು ನಿರ್ಮಿಸಲಾಗಿರುತ್ತದೆ. ಮೂಡು ಶೆಡ್ಡೆ ಗ್ರಾಮವು ಈ ಹಿಂದಿನಿಂದಲೂ ಕಾವೂರು ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿರುತ್ತದೆ. ಮೂಡು ಶೆಡ್ಡೆ ಪ್ರದೇಶಗಳನ್ನು ಕಾವೂರು ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಡಿಸಿರುವುದು ಸೂಕ್ತವಾಗಿರುತ್ತದೆ. |

**ಸಂಖ್ಯೆ: ಹೆಚ್‌ಡಿ 168 ಪಿಓಪಿ 2025**

**(ಡಾ|| ಜಿ.ಪರಮೇಶ್ವರ)**
ಗೃಹ ಸಚಿವರು.